

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ತಡಕಲೂರು ಗ್ರಾಮದ **ಅರುಣಾ**, ಸರ್ಕಾರಿ ಶಾಲೆಯಲ್ಲಿ ಓದಿದ ಹುಡುಗಿ. ಅಪ್ಪ, ಸಾಲದ ಹೊರೆಯಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಾಗ ಇವರಿಗೆ ಆಕಾಶವೇ ಕಳಚಿ ಮೈಮೇಲೆ ಬಿದ್ದಂತಹ ಅನುಭವ. ಆದರೆ, ಅದರಿಂದ ಕುಗ್ಗಿ ಕೂರದೆ ಮೈಕೊಡವಿಕೊಂಡು ಎದ್ದ ಅರುಣಾ, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಛಲದಂಕ ಮಲ್ಲಿಯಾಗಿ ಯಶಸ್ಸಿಗೆ ಯತ್ನಿಸಿದವರು ಮತ್ತು ಆ ಯತ್ನದಲ್ಲಿ ಗೆಲುವನ್ನೂ ಸಾಧಿಸಿದವರು.



ಅರುಣಾ

ಡಿಪಾರ್ಟ್‌ಮೆಂಟ್' ಅನ್ನು ಶುರುಮಾಡಿತು. ಆಗ ಈ ಸೇವೆಗೆ ನೇರ ಆಯ್ಕೆಯಾದ ಅಭ್ಯರ್ಥಿಗಳನ್ನು ಫ್ರಾನ್ಸ್ ಹಾಗೂ ಜರ್ಮನಿಗೆ ತರಬೇತಿಗಾಗಿ ಕಳಿಸಲಾಗುತ್ತಿತ್ತು. ಮುಂದೆ ರೈಲ್ವೆ ಹಾಗೂ ಅಂಚೆ ಅಧಿಕಾರಿಗಳನ್ನೂ ನಾಗರಿಕ ಸೇವಾ ಆಯೋಗದಿಂದಲೇ ಆಯ್ಕೆಮಾಡುವ ಸಂಪ್ರದಾಯ ಆರಂಭಿಸಲಾಯಿತು. ಭಾರತದಲ್ಲಿ ಲೋಕಸೇವಾ ಆಯೋಗವನ್ನು ಸ್ಥಾಪಿಸಿದ್ದು 1919ರಲ್ಲಿ. ಅದಕ್ಕಾಗಿ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಕಾಯ್ದೆಯನ್ನೇ ರೂಪಿಸಲಾಯಿತು. ಸ್ವಾತಂತ್ರ್ಯ ಸಿಕ್ಕಮೇಲೆ ನಾಗರಿಕ ಸೇವೆಗೆ ಅಭ್ಯರ್ಥಿಗಳನ್ನು ಆಯ್ಕೆಮಾಡುವ ವ್ಯವಸ್ಥೆಗೆ ಕಾನೂನಿನ ಮಾನ್ಯತೆ ದೊರಕಿಸಿಕೊಡಲು ಅಖಿಲ ಭಾರತ ಸೇವಾ ಕಾಯ್ದೆ–1951ಅನ್ನು ಜಾರಿಗೆ ತರಲಾಯಿತು. ಇಂತಹ ಭವ್ಯ ಇತಿಹಾಸ ಹೊಂದಿರುವ ಯುಪಿಎಸ್‌ಸಿ, ದೇಶದ ಯುವಪೀಳಿಗೆಯ ಎದೆಯಲ್ಲಿ ಹೊಂಗನಸುಗಳನ್ನು ಬಿತ್ತಿದೆ.

## ಬೆರಗು ಮೂಡಿಸಿದ ಅರುಣಾ

ಈ ಸಲದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ತಡಕಲೂರು ಗ್ರಾಮದ ಅರುಣಾ ಅವರದು ಎಂತಹ ಸ್ಫೂರ್ತಿದಾಯಕ ಸಾಧನೆ ನೋಡಿ. ಸರ್ಕಾರಿ ಶಾಲೆಯಲ್ಲಿ ಓದಿದ ಹುಡುಗಿ ಅವರು. ಅಪ್ಪ, ಸಾಲದ ಹೊರೆಯಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಾಗ ಇವರಿಗೆ ಆಕಾಶವೇ ಕಳಚಿ ಮೈಮೇಲೆ ಬಿದ್ದಂತಹ ಅನುಭವ. ಆದರೆ, ಅದರಿಂದ ಕುಗ್ಗಿ ಕೂರದೆ ಮೈಕೊಡವಿಕೊಂಡು ಎದ್ದ ಅರುಣಾ, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಛಲದಂಕ ಮಲ್ಲಿಯಾಗಿ ಯಶಸ್ಸಿಗೆ ಯತ್ನಿಸಿದವರು ಮತ್ತು ಆ ಯತ್ನದಲ್ಲಿ ಗೆಲುವನ್ನೂ ಸಾಧಿಸಿದವರು. ಸಂದರ್ಶನದಲ್ಲಿ ನಾಲ್ಕು ಬಾರಿ ವೈಫಲ್ಯದ ಕಹಿಯನ್ನು ಅನುಭವಿಸಿದ್ದ ಅವರು, ಐದನೇ ಯತ್ನದಲ್ಲಿ ಯಶಸ್ಸಿನ ಸಿಹಿಯನ್ನು ಉಂಡವರು. ಮುಖ್ಯ ಪರೀಕ್ಷೆ ಬರೆಯುವಾಗಲೇ ಕೋವಿಡ್‌ನಿಂದ ಬಳಲಿ, ಕುಸಿದುಬಿದ್ದರೂ ಪಟ್ಟುಬಿಡದೆ ಪರೀಕ್ಷೆಯನ್ನು ಪೂರ್ಣಗೊಳಿಸಿದ ಗಟ್ಟಿಗಿತ್ತಿ. ಕೊನೆಗೆ 308ನೇ ರ‍್ಯಾಂಕ್ ಗಳಿಸಿ, ನಾಗರಿಕ ಸೇವೆಗೆ ಈಗ ಸನ್ನದ್ಧವಾಗಿ ನಿಂತವರು.

ಅರುಣಾ ಅವರದು ದೊಡ್ಡ ಕುಟುಂಬ. ತಂದೆ–ತಾಯಿಯ ಐವರು ಮಕ್ಕಳಲ್ಲಿ (ಅದರಲ್ಲೂ ನಾಲ್ವರು ಹೆಣ್ಣುಮಕ್ಕಳು) ಮಧ್ಯದವರು ಈಕೆ. ಬಡತನದಲ್ಲಿ ಎಲ್ಲ ಮಕ್ಕಳನ್ನು ಸಾಕುವುದು, ಓದಿಸುವುದು ಕುಟುಂಬಕ್ಕೆ ಕಷ್ಟವಾದಾಗ ಅರುಣಾ ಅವರು ಅಜ್ಜ–ಅಜ್ಜಿಯ ಜತೆ ಪಾವಗಡದ ಮಂಗಲವಾಡ ಎಂಬ ಗ್ರಾಮದಲ್ಲಿ ಬಾಲ್ಯವನ್ನು ಕಳೆಯಬೇಕಾಯಿತು. ಆ ಪುಟ್ಟ ಊರಿನ ಗುಡಿಸಲವೇ ಅರುಣಾ ಪಾಲಿಗೆ ಅರಮನೆಯಾಗಿತ್ತು. ಬುಡ್ಡಿ ಬೆಳಕಿನಲ್ಲಿ ಓದಿದ ದಿನಗಳನ್ನು ಅವರಿನ್ನೂ ಮರೆತಿಲ್ಲ.

ಬಡತನವಾಗಲಿ, ಸೌಲಭ್ಯಗಳ ಕೊರತೆಯಾಗಲಿ ಅರುಣಾ ಅವರ ಯಶಸ್ಸಿನ ಹಂಬಲಕ್ಕೆ ಅಡಚಣೆ ಆಗಲಿಲ್ಲ. ಅಕ್ಕಪಕ್ಕದ ಮನೆಯವರಿಂದ ಪತ್ರಿಕೆಗಳನ್ನು ಕೇಳಿ ಪಡೆದುಕೊಂಡು ಓದುತ್ತಿದ್ದ ಅರುಣಾ, ಗ್ರಂಥಾಲಯಗಳಲ್ಲಿ ಕಳೆದ ಸಮಯಕ್ಕೂ